## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ

**ಸಿ.ಸಿ ನಂ. 249/2017 PW.1**

ಸಾಕ್ಷಿಯನ್ನು ದಿನಾಂಕಃ20/01/2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ವಕೀಲರಿಂದಃ**

ನಾನು ಇದೇ ನ್ಯಾಯಾಲಯದಲ್ಲಿ ಸಿಸಿ ನಂ. 844/2011 ನೇದ್ದನ್ನು ಆರೋಪಿತರ ವಿರುದ್ಧ ದಾಖಲಿಸಿದ್ದೆನು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಂಪೂರ್ಣವಾಗಿ ವಿಚಾರಣೆಯಾಗಿ ಆರೋಪಿತರು ನಿರಪರಾಧಿಗಳೆಂದು ನಿರ್ಧರಿಸಿ ದಿಃ 04.10.2016 ರಂದು ಪ್ರಕರಣ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. ಅದೇ ಪ್ರಕಾರ 4 ನೇ ಆರೋಪಿ ಅಣ್ಣಪ್ಪ ನನ್ನ ವಿರುದ್ಧ ಸಿಸಿ ನಂ. 994/2011 ನೇದ್ದನ್ನು ದಾಖಲಿಸಿದ್ದ ಎಂದರೆ ಸರಿ. ಸದರಿ ಪ್ರಕರಣ ಸಹ ಇದೇ ನ್ಯಾಯಾಲಯದಲ್ಲಿ ದಿಃ 31.03.2016 ರಂದು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. 6 ನೇ ಆರೋಪಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಕ್ರಿ.ಪಿ. 7390/2020 ನೇದ್ದನ್ನು ದಾಖಲಿಸಿದ್ದ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಚ್ಚ ನ್ಯಾಯಲಯವು ನಿರ್ದೇಶನಗಳನ್ನು ನೀಡಿ ದಿಃ 07.11.2020 ರಂದು ಮುಕ್ತಾಯಗೊಳಿಸಿರುತ್ತದೆ ಎಂದರೆ ಸರಿ. ಅದೇ ರೀತಿ 4 ನೇ ಆರೋಪಿಯು ಸಹ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಕ್ರಿ.ಪಿ. 7391/2020 ನೇದ್ದನ್ನು ದಾಖಲಿಸಿದ್ದ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಚ್ಚ ನ್ಯಾಯಲಯವು ನಿರ್ದೇಶನಗಳನ್ನು ನೀಡಿ ದಿಃ 07.11.2020 ರಂದು ಮುಕ್ತಾಯಗೊಳಿಸಿರುತ್ತದೆ ಎಂದರೆ ಸರಿ.

2. ದಿಃ 12.12.2005 ರಂದು ನಾನು ಅಲ್ಗರ್ ಸ್ವಾಮಿ ತಂದೆ ಕೆ ಚೆನ್ನುಸ್ವಾಮಿ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಆ ಬಗ್ಗೆ ಪೊಲೀಸರು ಸದರಿ ದಿನದಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ದಿಃ 25.09.2006 ರಂದು 4 ನೇ ಆರೋಪಿ ವಿರುದ್ಧ ದೂರು ಸಲ್ಲಿಸಿದ್ದು ಆ ಬಗ್ಗೆ ಸಹ ಪೊಲೀಸರು ಹಿಂಬರಹ ನೀಡಿರುತ್ತಾರೆ ಎಂದರೆ ನಿಜ. ದಿಃ 20.06.2009 ರಂದು 1 ನೇ ಆರೋಪಿ ನನ್ನ ವಿರುದ್ಧ ದೂರು ನೀಡಿದ್ದು ಹಿಂಬರಹ ನೀಡಿ ಮುಕ್ತಾಯಗೊಳಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

3. ಆರೋಪಿಗಳ ವಿರುದ್ಧ ಸಿಸಿ ನಂ. 391/2010 ನೇದ್ದನ್ನು ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣವು ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ವಿಚಾರಣೆಗೊಂಡು ಆರೋಪಿತರು ನಿರಪರಾಧಿಗಳೆಂದು ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ ಎಂದರೆ

ನಿಜ. ನಾನು ನನ್ನ ಮುಖ್ಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ 2 ಬಾರಿ ನೀಡಿರುತ್ತೇನೆ. ಸದರಿ ಹೇಳಿಕೆಗಳು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಆರೋಪಿತರು ನನ್ನ ಸಂಬಳವನ್ನು ತಾವೇ ಡ್ರಾ ಮಾಡಿರುವ ಬಗ್ಗೆ ತೋರಿಸಲು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ನಿಪಿ.1 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ.2 ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸನ್ 2006 ರಲ್ಲಿ ನಿಪಿ.3 ರಂತೆ 1 ನೇ ಆರೋಪಿಗೆ ಕಳುಹಿಸಿದ ನೋಟೀಸಿನ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನನ್ನ ನೋಟಿಸಿಗೆ ನಿಪಿ.4 ರಂತೆ 1 ನೇ ಆರೋಪಿ ತಮ್ಮ ವಕೀಲರ ಮುಖಾಂತರ ಪ್ರತ್ಯುತ್ತರ ಕಳುಹಿಸಿರುತ್ತಾನೆ ಎಂದರೆ ನಿಜ. ಅದೇ ರೀತಿ ನಿಪಿ .5 ರಂತೆ 6 ನೇ ಆರೋಪಿ ಸಹ ಪ್ರತ್ಯುತ್ತರ ಕಳುಹಿಸಿರುತ್ತಾನೆ ಎಂದರೆ ನಿಜ.

4. ನಿಪಿ.8 ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.9 ಮತ್ತು ಅದರಲ್ಲಿ ಹೇಳಿರುವ ಸಂಗತಿಗಳು ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.10 ಕ್ಕೂ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.12 ಮತ್ತು 13 ನೇದ್ದನ್ನು 1 ನೇ ಆರೋಪಿಯು ಬ್ಯಾಂಕ ನೌಕರ 7 ನೇ ಆರೋಪಿಯೊಂದಿಗೆ ಮಿಲಾಪೆಯಾಗಿ ಸುಳ್ಳು ಸಾಲವನ್ನು ಪಡೆದಿರುವುದಾಗಿ ತೋರಿಸಲು ಹಾಜರುಪಡಿಸಿರುತ್ತೇನೆ. ನಿಪಿ.12 ಮತ್ತು 13 ರಲ್ಲಿ ಆ ಬಗ್ಗೆ ವಿವರಣೆ ಇರುವುದಿಲ್ಲ. ನಾನು ದಾಖಲು ಮಾಡಿದ ಪ್ರಕರಣಕ್ಕೂ ಹಾಗೂ ಹಾಜರುಪಡಿಸಿರುವ ದಾಖಲೆಗಳಿಗೂ ಸಹ ಯಾವುದೇ ಸಂಬಂಧ ಇರದೇ ಇದ್ದರೂ ಸಹ ವಿನಾಕಾರಣ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1,4,5 ಮತ್ತು 6 ನೇ ಆರೋಪಿತರು ನನ್ನ ವಿರುದ್ಧ ಸಲ್ಲಿಸಿದ ಚೆಕ್ ಬೌನ್ಸ್ ಪ್ರಕರಣದಲ್ಲಿ ಆದ ಆದೇಶದಂತೆ ನಾನು ಅವರಿಗೆ ಹಣವನ್ನು ಕೊಡಬೇಕಾಗುತ್ತದೆ ಎಂದು ಅದರಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ದುರುದ್ದೇಶದಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು 7 ನೇ ಆರೋಪಿತರ ಪರ ವಕೀಲರಿಂದಃ**

7 ನೇ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಿದ್ದು ಮಂಜೂರು ಮಾಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇದೆ.**

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹರಿಹರ.